## ಸಿಸಿ ಸಂಖ್ಯೆ: 1223/2019 ಡಿಡಬ್ಲ್ಯೂ: 2

## ದಿನಾಂಕ 05-12-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು: ಫಿರ್ಯಾದಿ ಪರ ವಕೀಲರಿಂದ**

ನನ್ನದು ಮತ್ತು ಆರೋಪಿತನದು ಒಂದೇ ಗ್ರಾಮ ಎಂದರೆ ನಿಜ. ನಾನು ಕೂಲಿ ಮಾಡುತ್ತೇನೆ ಎಂದರೆ ನಿಜ. ಸದ್ರಿ ನಾನು 2016-17 ನೇ ಸಾಲಿನಲ್ಲಿ ಮೆಣಸಿನ ಗಿಡಗಳ ಸಸಿ ನೆಟ್ಟು ವ್ಯಾಪಾರ ಮಾಡುತ್ತಿದ್ದೆ ಎಂದು ತೋರಿಸಲು ಯಾವುದೇ ದಾಖಲೆ ಸಲ್ಲಿಸಿಲ್ಲ. ಸದ್ರಿ 20 ಕೆಜಿ ಮೆಣಸಿನ ಬೀಜ ಫಿರ್ಯಾದಿಗೆ ಕೊಟ್ಟಿರುತ್ತೇನೆ ಎಂದು ತೋರಿಸಲು ಯಾವುದೇ ದಾಖಲೆ ಇಲ್ಲ. ಆರೋಪಿ 2019 ರಲ್ಲಿ ಫಿರ್ಯಾದಿಗೆ 47 ಕೆಜಿ ಬೀಜ ಕೊಟ್ಟ ಬಗ್ಗೆ ತೋರಿಸಲು ಯಾವುದೇ ದಾಖಲೆ ಇಲ್ಲ. ಆರೋಪಿ ಮತ್ತು ಫಿರ್ಯಾದಿ ಮಧ್ಯ ಜಗಳ ಆದ ಕುರಿತು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ ಕುರಿತು ಯಾವುದೇ ದಾಖಲೆ ಇರುವುದಿಲ್ಲ. ಸದ್ರಿ ಫಿರ್ಯಾದಿ ಕಡೆಯಿಂದ ಸ್ಟ್ಯಾಂಪನ್ನು ನಮ್ಮ ಕಡೆಯಿಂದ ಪಡೆದ ಬಗ್ಗೆ ತೋರಿಸಲು ಸದ್ರಿ ಸ್ಟ್ಯಾಂಪನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಮತ್ತು ಆ ರೀತಿಯ ಯಾವುದೇ ದಾಖಲೆ ಇರುವುದಿಲ್ಲ. ನಾನು ಆರೋಪಿ ಹೇಳಿದಂತೆ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ನನಗೆ ಈ ದಿನ ಸಾಕ್ಷ್ಯ ನುಡಿಯಲು ಆರೋಪಿತನೇ ಕರೆದುಕೊಂಡು ಬಂದಿರುತ್ತಾನೆ ಎಂದರೆ ನಿಜ. ಆರೋಪಿ ನನಗೆ ಹೇಳಿದ ನಂತರವೇ ಈ ಪ್ರಕರಣದ ಕುರಿತು ಮಾಹಿತಿ ಬಂದಿದೆ ಎಂದರೆ ನಿಜ.

ನಾನು ಆರೋಪಿ ಮತ್ತು ಫಿರ್ಯಾದಿಯ ಮಧ್ಯ ಯಾವುದೇ ವ್ಯವಹಾರ ಆಗಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರದೇ ಇದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ನಾನು ಈ ದಿನ ನ್ಯಾಯಾಲಯದಲ್ಲಿ ಆರೋಪಿ ಪರ ಸಾಕ್ಷ್ಯ ನುಡಿದರೆ ದಿನಗೂಲಿ ನನ್ನ ಯಜಮಾನ ಕೊಡುತ್ತಾನೆ ಎಂದರೆ ಸರಿ ಅಲ್ಲ. ನಾನು 2016-17 ರಲ್ಲಿ ನನ್ನದು ಯಾವುದೇ ಜಮೀನು ಇರದೇ ಇದ್ದರೂ ಸಹ ಬೀಜ ಬೆಳೆಸಿ ಕೊಟ್ಟಿರುತ್ತೇನೆ ಎಂದರೆ ಸರಿ ಅಲ್ಲ.

**ಮರು ವಿಚಾರಣೆ:** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**(ಓ.ಹೇ.ಕೇ.ಸ.)**

**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ, ರಾಣೆಬೆನ್ನೂರು.**

**ಸಾಕ್ಷಿದಾರರ ಸಹಿಃ**